ಬಿ. ಚಂದ್ರೇಗೌಡ, ಬೆಂಗಳೂರು

◆ ಹೆಣ್ಣನ್ನು ಹೂವಿಗೆ ಹೋಲಿಸುವುದು ಸರಿಯೆ?



ಚೂರೂ ಸರಿಯಿಲ್ಲ. ಗಂಡಿನ ಕೊರಳಿಗೆ ನೂರಾರು ಹೂಗಳ ಹಾರವೇ ಬೀಳುತ್ತದೆ. ಹೆಣ್ಣು ಒಂದು ದೊರೆವುದೂ ಕಷ್ಟ.

ಪಿ.ಜಿ. ರಾಜ್, ಶಿವಮೊಗ್ಗ

◆ ಹೆಂಡತಿಯನ್ನು ಅರ್ಧ ಅಂಗಿ, ಹಾಫ್ ಶರ್ಟ್ ಎಂದು ಏಕೆ ಕರೆಯುತ್ತಾರೆ?

ಗಂಡಿನ ಶರ್ಟಿಗೆ ಬೇಕಾದಷ್ಟು ಬಟ್ಟೆಯಲ್ಲಿ ಹೆಣ್ಣಿಗೆ ಎರಡು ಬ್ಲೌಸ್ ಆಗುವುದರಿಂದ.

ಕೆ.ಹೆಚ್.ಆರ್.ಕೆ. ರೆಡ್ಡಿ, ಬೆಂಗಳೂರು

◆ ನಟರಲ್ಲಿ ಅಣ್ಣಾವ್ರು ಉತ್ತಮ ನಟ. ನೀರಲ್ಲಿ ಉತ್ತಮ ನೀರು ಯಾವುದು?

ಮೊದಲ ದೀಪಾವಳಿಯ ಎಣ್ಣೆನೀರು!

ಹೆಚ್.ಕೆ. ವಿಜಯಕುಮಾರ್, ರಾಯಚೂರು

◆ ಹೆಚ್ಚಿನ ಭಾರತೀಯರಿಗೆ ವಿದೇಶಗಳ ಮೇಲೆ ಏಕೆ ಹೆಚ್ಚು ವ್ಯಾಮೋಹ?



ಬಿಳಿ ಹೆಣ್ಣು, ಕಪ್ಪು ಹಣ ಎರಡಕ್ಕೂ ಅದೇ ಹೇಳಿಮಾಡಿಸಿದ ಸ್ಥಳವಾದ್ದರಿಂದ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

◆ ಜೀವನದಲ್ಲಿ ಬರೀ ಸೋಲೇ ಎದುರಾದರೆ ಹೇಗೆ ಸಾರ್?

ಚಿಂತಿಸಬೇಡಿ. ಆರ್‌ಸಿಬಿಯವರು ತಮ್ಮ ತಂಡಕ್ಕೆ ಸೇರಿಸಿಕೊಳ್ಳುತ್ತಾರೆ, ದುಡ್ಡೂ ಕೊಡುತ್ತಾರೆ.

ಚನ್ನವೀರಪ್ಪ ಬಿದರಹಳ್ಳಿ, ಹಿರೇಹಡಗಲಿ

◆ ವಾಸ್ತವಕ್ಕೂ, ಆದರ್ಶಕ್ಕೂ ಇರುವ ವ್ಯತ್ಯಾಸವೇನು?

ಆದರ್ಶ ರೈಲ್ವೇ ಹಳಿ; ವಾಸ್ತವ ಟ್ರ್ಯಾಕ್ ಚೇಂಜರ್.

ಸೃಜನ ಜೈನ್, ಹೂವಿನಹಡಗಲಿ

◆ ಅಡುಗೆ ಮಾಡುವವನಿಗೆ ತಿನ್ನಲು ಬಾಯಿ ಇರುವುದಿಲ್ಲವಂತೆ. ಏಕೆ ಸಾರ್?

'ಹಾಗೇನಿಲ್ಲ; ನಮ್ಮೆಜಮಾನ್ರು ಚೆನ್ನಾಗೇ ಊಟ ಮಾಡ್ತಾರೆ' ಎಂದಳಿಲ್ಲೊಬ್ಬ ಗೃಹಿಣಿ.

ವಿ. ಹೇಮಂತಕುಮಾರ್, ಬೆಂಗಳೂರು

◆ ಗಂಗೆಯಲ್ಲಿ ಮುಳುಗಿದರೆ ಪಾಪ ಹೋಗುತ್ತೆ. ಪ್ರೀತಿಯಲ್ಲಿ ಮುಳುಗಿದರೆ?

'ಪಾಪ' ಬರುತ್ತೆ.

ರವೀಂದ್ರನಾಥ ಯಡಹಳ್ಳಿ, ಬೀಳಗಿ

◆ ಕಲೆಯ ಬಲೆಗೂ ಜೇಡರಬಲೆಗೂ ಇರುವ ವ್ಯತ್ಯಾಸವೇನು ಶಿವಾ?

ಕಲೆಯ ಬಲೆ ಜಂಗಮ; ಜೇಡರಬಲೆ ಸ್ಥಾವರ.

ಶಶಿಧರ, ಅಳದಂಗಡಿ

◆ ದೇವರಿಗೆ ಎಷ್ಟೇ ಬೈದರೂ ದೇವರ ಮರ್ಯಾದೆ ಹೋಗುವುದಿಲ್ಲವಂತೆ. ಹೌದಾ?

ಹ್ದ! ಚಿಕ್ಕ ಕ್ಷೇತ್ರವನ್ನಾಳುವವರಿಗೇ ಹೋಗದಿರುವಾಗ ಜಗವನ್ನಾಳುವವನಿಗೆ ಹೇಗೆ ಹೋಗಲು ಸಾಧ್ಯ!

ಎಂ.ಎಸ್. ಬೆಂಗಳೂರು

◆ ಅತ್ತೆ ಎಂಬ ಪದಕ್ಕೆ ಅಂಟುವ ಕಳಂಕ 'ಮಾವ'ನಿಗೆ ಬರುವುದೇ ಇಲ್ಲ. ಏಕೆ?

ಮಾವ ಕಾರ್ಯಕರ್ತ; ಅತ್ತೆ ಹೈಕಮಾಂಡ್. ಪಕ್ಷದ ಎಲ್ಲ ತಪ್ಪಿಗೂ ಹೈಕಮಾಂಡಿಗೇ ಕಳಂಕ.

ಗಂಜಾಂ ನಾಗರಾಜ, ಮೈಸೂರು

◆ ಹೆಂಡತಿ ಯಾವಾಗ ಸುಂದರವಾಗಿ ಕಾಣುತ್ತಾಳೆ?

ಸ್ವಂತ ಹೆಂಡತಿಯಾದರೆ ತವರಿಗೆ ಹೊರಟು ನಿಂತಾಗ; ಅನ್ಯರ ಹೆಂಡತಿಯಾದರೆ ಯಾವಾಗಲೂ!

ಪ್ಲೇಟ್ ಪ್ರಕಾಶ್, ಶಿವಮೊಗ್ಗ

◆ ಪ್ರೀತಿಸಿ ಮದುವೆಯಾದವರಲ್ಲಿ ಸಂಘರ್ಷವೇ ಜಾಸ್ತಿ. ಏಕೆ?

ಲವ್ ಮ್ಯಾರೇಜ್ ಅತ್ತಿಯ ಹಣ್ಣಿನಂತೆ; ಪ್ರೀತಿ ಹೊರಪದರ; ಮದುವೆ ಒಳಗಿನ ಹುಳು(ಕು)ಗಳು.

## ಬಹುಮಾನಿತ ಪ್ರಶ್ನೆ

ಕೆ.ಪಿ. ರಾಮಗುಂಡಿ, ಬೈಲಹೊಂಗಲ

◆ ಹೆಂಡತಿಯ ಸೌಂದರ್ಯ ಗಂಡನಿಗೆ ಕಾಣುವುದಿಲ್ಲವಂತೆ. ಹೌದೆ ಸಾರ್?

ಶುದ್ಧ ಸುಳ್ಳು. ಹೊಟ್ಟೆ ಉರಿಯುವ ಮಟ್ಟಕ್ಕೆ ಕಾಣುತ್ತದೆ ನೆರೆಮನೆಯ ಗಂಡನಿಗೆ.

ಶ್ರೀನಿವಾಸ ಜಿ. ಪದಕಿ, ಮುಂಬಯಿ

◆ ಆರು ಗುಣಗಳಿರುವ ವಧು ಸಿಗದಿರುವುದರಿಂದ ಒಂದೊಂದೇ ಗುಣವುಳ್ಳ ಆರು ವಧುಗಳನ್ನು ವರಿಸಬಹುದೆ?

ಮೂರಕ್ಕೇ ದಶರಥ ನೆಲ ಕಚ್ಚಿದ. ಆರೆಂದರೆ... ಪಾಪ! ನಿಮ್ಮ ಜಾತಕದಲ್ಲಿ ಅಲ್ಪಾಯುಷಿ ಎಂದಿದೆಯೋ ಏನೋ!

ಭಾರತಿ ಮಾನಗೆ, ಹೊನ್ನಾವರ

◆ ಗಣಿತ ಲೋಕಕ್ಕೆ ಭಾರತೀಯರ ಬಹು ದೊಡ್ಡ ಕೊಡುಗೆ ಯಾವುದು?

ಎಂತೆಂತಹ ಗಣಿತಜ್ಞರಿಗೂ ಎಣಿಸುವುದಕ್ಕೆ ದೊಡ್ಡ ಸವಾಲಾಗಿರುವ ಸ್ವಿಸ್ ಬ್ಯಾಂಕ್ ಹಣದ ಮೊತ್ತ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

◆ ರಸ್ತೆಯಲ್ಲಿ ಹಳ್ಳಗಳಿದ್ದರೆ ಬೂಟು ಹಾಕಿಕೊಂಡು ನಡೆಯಬಹುದು. ಬೂಟಿನಲ್ಲಿ ಹಳ್ಳವಿದ್ದರೆ?



ಇರಲೇಬೇಕಲ್ಲ! ಬೂಟಿನಲ್ಲಿ ಹಳ್ಳವಿಲ್ಲದಿದ್ದರೆ ಪಾದ ತೂರಿಸಲೇ ಆಗದು!

ನರಸಿಂಹ ಪೈ, ಹೊನ್ನಾವರ

◆ ಅಮ್ಮನ ಕುರಿತಾದ ಹಾಡು ಬಂದಾಗ ಎಂಥ ಸೂಪರ್ ಹಿಟ್ ಹಾಡುಗಳೂ ಹಿಂದೆ ಸರಿಯುವುದೇಕೆ?

ಅವು ಕಿವಿಯ ತಮಟೆಯನ್ನಲ್ಲದೆ ಹೃದಯದ ಕವಾಟವನ್ನು ತಟ್ಟುವುದರಿಂದ.

■ ರಾಮ್